

ಮೀನುಗಳಿವೆಯನ್ನಿಸಿತ್ತೋ ಅಲ್ಲಿವರೆಗೆ ಹೋಗಿ ತಮ್ಮ ತಮ್ಮ ಬಲೆಗಳನ್ನು ನೀರಿಗಿಳಿಸಿದ್ದರು. ಮಬ್ಬು ಕವಿದು ತುಂಬ ಕೆಳಗೆ ತೂಗುತ್ತಿದೆಯೆನ್ನಿಸುವಂತಿದ್ದ ಸಂಜೆಯಾಕಾಶದ ಕೆಳಗೆ ಅಷ್ಟೇ ಮಂಕು ಕವಿದ, ಜಡವಾದ, ಕಾಂತಿಹೀನವಾದ ಸಮುದ್ರ. ಜೊತೆಗೆ ಉಸಿರುಕಟ್ಟಿಸುವ, ಮೈಯೆಲ್ಲಾ ಬೆವರಿಸುವ ಸೆಕೆಯೋ ಸೆಕೆ. ಗಾಳಿಯ ಒತ್ತಡದಿಂದಾಗಿ ಅವರ ತಲೆಗಳು ದುಮುಗುಟ್ಟುತ್ತಿದ್ದವು. ಅದು ಯಾವುದೇ ಚಿಂತೆಯಿಲ್ಲದೆ ಹಾಯಾಗಿರಬಹುದಾದ ದಿನವಂತೂ ಆಗಿರಲಿಲ್ಲವೆನ್ನಿ. ಇಬ್ಬರೂ, ಒಬ್ಬರು ಇನ್ನೊಬ್ಬರನ್ನು ನೋಡಿ ಅದೆಷ್ಟು ವರ್ಷಗಳಾಗಿದ್ದವೋ, ಸಮುದ್ರದಲ್ಲಿ ತಾವು ಸಂಪೂರ್ಣ ಒಬ್ಬೊಂಟಿಯಾಗಿರುವಂತೆ ವರ್ತಿಸಿದರು. ಇಬ್ಬರೂ ಮೆಲ್ಲಗೆ ಹುಟ್ಟುಹಾಕುತ್ತಾ ತಮ್ಮ ತಮ್ಮ ಬಲೆಗಳನ್ನು ಹರಡಿದ್ದೆಡೆಯಲ್ಲೇ ತುಂಬಾ ಹೊತ್ತು ಸುತ್ತು ಹಾಕಿದರು. ಆಮೇಲೆ ತಮ್ಮ ತಮ್ಮ ಬಲೆಗಳಲ್ಲಿ ಸಿಕ್ಕುಹಾಕಿಕೊಂಡಿದ್ದ ಮೀನುಗಳನ್ನು ತಮ್ಮ ತಮ್ಮ ದೋಣಿಗಳೊಳಕ್ಕೆ ಸುರಿದುಕೊಂಡರು. ಈ ಮಧ್ಯೆ ತುಂಬಾ ಹೊತ್ತಿನಿಂದ ಹೆದರಿಸುತ್ತಿದ್ದ ಕಪ್ಪುಮೋಡಗಳು ಆಕಾಶವನ್ನು ಮುತ್ತಿಕೊಂಡವು. ಕೆಲವೇ ಕ್ಷಣಗಳಲ್ಲಿ ಸಮುದ್ರದ ಮೇಲೆ ಕಾಣಿಸಿಕೊಂಡ ಒಂದು ತೂಫಾನು ಭಯಂಕರವಾಗಿ ಘರ್ಜಿಸುತ್ತಾ ಮಳೆಹನಿಗಳನ್ನು ಸಿಂಪಡಿಸಿ ನೀರನ್ನು ಕಲಕಿತು. ಅಲೆಗಳು ಆಳೆತ್ತರ ಎದ್ದವು. ಆ ಇಬ್ಬರಿಗೆ ಅರಿವಾಗುವುದಕ್ಕೆ ಮುಂಚೆಯೇ ಭಾರಿ ಮಳೆ ಸುರಿಯತೊಡಗಿತು; ಸಮುದ್ರತೀರ ಕತ್ತಲಿನೊಳಗೆ ಮುಳುಗಿಹೋಯಿತು. ಸಮುದ್ರದ ಹೆದ್ದೆರೆಗಳ ಪ್ರವಾಹ ಆ ಇಬ್ಬರ ಹುಟ್ಟು ಹಾಕುವ ಕೌಶಲವನ್ನಷ್ಟೇ ಅಲ್ಲ, ಅವರ ಕಸುವನ್ನು ಕೂಡ ಹೀರಿಬಿಟ್ಟಿತು. ಇಬ್ಬರೂ ಹುಟ್ಟು ಹಾಕಿದರು, ಹಾಕಿದರು, ಹಾಕಿದರು, ಹಿಂದಕ್ಕೂ ಮುಂದಕ್ಕೂ ತುಯ್ದಾಡಿದರು. ಅವರ ಆ ಯಾನವನ್ನು ನಮಗೆ ಎಷ್ಟು ಹೊತ್ತಿನವರೆಗೆ ಬೇಕೋ ಅಷ್ಟು ಹೊತ್ತಿನವರೆಗೂ ಮುಂದುವರಿಸಬಹುದು. ಪರಸ್ಪರ ಆಳವಾಗಿ ದ್ವೇಷಿಸುತ್ತಿದ್ದ ಆ ಇಬ್ಬರನ್ನು ನಾವು ನಮಗೆ ತೃಪ್ತಿಯಾಗುವವರೆಗೂ ಬಿರುಗಾಳಿಗೊಡ್ಡಬಹುದು, ಬಿರುಮಳೆ ಅವರನ್ನು ಅಪ್ಪಳಿಸುವಂತೆ ಮಾಡಬಹುದು. ನಮ್ಮ ಕಲ್ಪನಾಲಹರಿಗೆ ಮಿತಿಯೆಲ್ಲಿ?